ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 17/10/20

# ಕಲಬುರಗಿಯಲ್ಲಿ 30 ವರ್ಷದಲ್ಲೇ ದೊಡ್ಡ ಪ್ರವಾಹವಿದು: ಅಶೋಕ್

## ರಾಷ್ಟ್ರೀಯ ವಿಪತ್ತಿನಡಿ ಹೆಚ್ಚಿನ ಪರಿಹಾರಕ್ಕೆ ಕೇಂದ್ರಕ್ಕೆ ಮನವಿ

• **ಕನ್ನಡಪ್ರಭ ವಾರ್ತೆ**
ಕಲಬುರಗಿ/ಶಹಾಪುರ

ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಈ ವರ್ಷ ವಾಡಿಕೆಗಿಂತ ಐದಾರು ಪಟ್ಟು ಹೆಚ್ಚು ಮಳೆಯಾಗಿದ್ದು, ಕಲಬುರಗಿಯಲ್ಲಿ ಮೂವತ್ತು ವರ್ಷಗಳ ಬಳಿಕ ಇಷ್ಟು ದೊಡ್ಡ ಪ್ರವಾಹ ಬಂದಿದೆ. ಒಟ್ಟಾರೆ ರಾಜ್ಯದಲ್ಲಿ 3.31 ಲಕ್ಷ ಹೆಕ್ಟೇರ್ ಕೃಷಿ ಬೆಳೆ, 32976 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾಗೂ 38626 ಹೆಕ್ಟೇರ್ ಪ್ಲ್ಯಾಂಟೇಷನ್ ಬೆಳೆ ನಾಶವಾಗಿದ್ದು 1268 ಸೇತುವೆ, 10978 ಮನೆಗಳಿಗೂ ಹಾನಿಯಾಗಿದೆ. ಈ ಹಿನ್ನೆಲೆಯಲ್ಲಿ ಇದೊಂದು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಿ ಹೆಚ್ಚಿನ ಪರಿಹಾರ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡುತ್ತೇವೆ ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದ್ದಾರೆ.



ಕಲಬುರಗಿ ತಾಲೂಕಿನ ಸೈಯ್ಯದ್ ಚಿಂಚೋಳಿ ಗ್ರಾಮ ಸ್ಥಳಾಂತರಕ್ಕೆ ಕಂದಾಯ ಸಚಿವ ಅಶೋಕ್ ಅವರಿಗೆ ಗ್ರಾಮಸ್ಥರು ಆಗ್ರಹಿಸಿದರು.

ಶುಕ್ರವಾರ ನೆರೆ ಪೀಡಿದ ಯಾದಗಿರಿಯ ರೋಜಾ, ಉರಸಗುಂಡಗಿ ಮತ್ತು ಕಲಬುರಗಿಯ ಸಯ್ಯದ್ ಚಿಂಚೋಳಿ, ಕಟ್ಟಿಸಂಗಾವಿಗೆ ತೆಪ್ಪದಲ್ಲೇ ಭೇಟಿ ನೀಡಿದರು. ಇದೇ ವೇಳೆ ಅಲ್ಪಸಂಖ್ಯಾತರ ಬಡಾವಣೆ ಎಂದು ಸಚಿವರು ಮೌಲಾಲಿ ಕಾಲೋನಿಗೆ ಬರುತ್ತಿಲ್ಲ ಎಂದು ಘೇರಾವ್‌ಗೂ ಯತ್ನಿಸಿದ್ದಾರೆ.

# ಮನೆ ಮಾಳಿಗೆ ಹತ್ತಿ ಕುಳಿತ ಅಜ್ಜಿ!



ಕಲಬುರಗಿ/ಇಂಡಿ: ಭೀಮಾ ನದಿಯ ಭಾರಿ ನೀರಿನಿಂದ ಇಂಡಿ ತಾಲೂಕಿನ ಫಿರೋಜಾ ಬಾದ್ ಗ್ರಾಮದ ಮನೆಗಳು ಜಲಾವೃತವಾಗಿದ್ದು, ಗ್ರಾಮದ ಅಜ್ಜಿಯೊಬ್ಬಳು ಮನೆ ಮಾಳಿಗೆ ಮೇಲೆ ಕುಳಿತು ಯಾವುದೇ ಕಾರಣಕ್ಕೂ ಮಾಳಿಗೆಯಿಂದ ಕೆಳಗಿಯೋಲ್ಲ, ಗಂಜಿ ಕೇಂದ್ರಕ್ಕೆ ಹೋಗಲ್ಲ ಎಂದು ಗ್ರಾಮಸ್ಥರು ತಿಳಿ ಹೇಳಿದರೂ ಪಟ್ಟು ಹಿಡಿದು ಅಲ್ಲೆ ಕುಳಿತಿದ್ದಳು. ಬಳಿಕ ಸಮಾಧಾನ ಮಾಡಿ ರಕ್ಷಿಸಲಾಗಿದೆ.

## ಪೂಜೆಗಾಗಿ 8 ಕಿ.ಮೀ. ಈಜಿದ ಅರ್ಚಕ

ಆಲಮೇಲ/ಕಲಬುರಗಿ: ಭೀಮಾನದಿ ತನ್ನ ಆರ್ಭಟ ಹೆಚ್ಚಿದ್ದರು ವಿಜಯಪುರದ ಆಲಮೇಲ ತಾಲೂಕಿನ ದೇವಣಗಾಂವನಿಂದ 8 ಕಿ.ಮೀ ದೂರದಲ್ಲಿರುವ ದೇವಸ್ಥಾನಕ್ಕೆ ತೆರಳಿ ಮಲ್ಲಿಕಾರ್ಜುನ ಪಾಟೀಲ್ ಎಂಬ ಅರ್ಚಕರು ಆಂಜನೇಯನಿಗೆ ಪೂಜೆ ಸಲ್ಲಿಸುತ್ತಿದ್ದಾರೆ.

**ಪ್ರವಾಹದಲ್ಲೇ ಈಜಿ ದೇವರ ಪೂಜೆ:** ಪ್ರವಾಹದಿಂದ ಜಲಾವೃತವಾಗಿರುವ ಫಿರೋ ಜಾಬಾದ್ ಗ್ರಾಮದ ಹನುಮಂತ ಎಂಬ ಅರ್ಚಕರು ಶನಿವಾರ ಅಮಾವಾಸ್ಯೆ ಹಿನ್ನೆಲೆಯಲ್ಲಿ ಪ್ರವಾಹದ ಲೆಕ್ಕಿಸದೇ ಈಜಿ ಹೋಗಿ ಮಹಾಲಕ್ಷ್ಮಿ ಹಾಗೂ ಅಂಬಿಗರ ಚೌಡಯ್ಯ ಮೂರ್ತಿಗಳಿಗೆ ಪೂಜೆ ಸಲ್ಲಿಸಿದ್ದಾರೆ.

## ಹಸುಗೂಸು, ಬಾಣಂತಿ ರಕ್ಷಣೆ

ಆಲಮೇಲ: ಭೀಮಾನದಿಯಿಂದಾಗಿ ದ್ವೀಪದಂತಾಗಿರುವ ವಿಜಯಪುರದ ಆಲಮೇಲ ತಾಲೂಕಿನ ತಾರಾಪುರದಲ್ಲಿ ಸಿಕ್ಕಿಹಾಕಿಕೊಂಡಿರುವ ಹಸುಗೂಸು ಮತ್ತು ಬಾಣಂತಿಯನ್ನು ತಾಲೂಕು ಆಡಳಿತ ರಕ್ಷಣೆ ಮಾಡಿದೆ. ಸಿಂದಗಿ ತಹಸೀಲ್ದಾರ್ ಸಂಜು ಕುಮಾರದಾಸ್ ನಾಡದೋಣಿ ಮೂಲಕ ಹೊರಗಡೆ ಕರೆದುಕೊಂಡು ಅವರ ಸಂಬಂಧಿಕರ ಊರಿಗೆ ಕಳುಹಿಸಿಕೊಟ್ಟಿದ್ದಾರೆ.

## ಸಂಸ್ಕೃತ ವಿದ್ಯಾಪೀಠಕ್ಕೆ ನುಗ್ಗಿದ ನೀರು

ಕಲಬುರಗಿ: ಭೀಮಾ ನದಿ ಉಕ್ಕೇರಿದ ಪರಿಣಾಮ ಇಲ್ಲಿನ ವೇದೇಶತೀರ್ಥ ಸಂಸ್ಕೃತ ವಿದ್ಯಾಪೀಠಕ್ಕೆ ನೀರು ನುಗ್ಗಿದ್ದು, ವಿದ್ಯಾಪೀಠದ ಮಕ್ಕಳನ್ನೆಲ್ಲ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ. ವಿದ್ಯಾಪೀಠದಲ್ಲಿ ವೇದ, ಉಪನಿಷತ್ತು, ಸಂಸ್ಕೃತ ಇತ್ಯಾದಿ ಅಧ್ಯಯನ ನಿರತ 50 ಮಕ್ಕಳಿದ್ದಾರೆ. ಭೀಮಾ ನದಿಗೆ ಪ್ರವಾಹ ಭೀತಿ ಎದುರಾದಾಗ ಮುನ್ನೆಚ್ಚರಿಕೆ ಕ್ರಮವಾಗಿ ಮಕ್ಕಳನ್ನೆಲ್ಲ ಎತ್ತರದ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ ಎಂದು ಕುಲಪತಿ ಪಂ. ಅನಂತಾಚಾರ್ಯ ಅಕಮಂಚಿ ಹೇಳಿದ್ದಾರೆ.

## ನಾನು ಸತ್ರೂ ಪರ್ವಾಗಿಲ್ಲ, ಕೋಳಿಗಳು ಬದುಕಬೇಕು!

ಯಾದಗಿರಿ: ಪ್ರವಾಹ ಪೀಡಿತ ಗ್ರಾಮಸ್ಥರ ಸ್ಥಳಾಂತರ ವೇಳೆ ಬಸ್ಸಿನಲ್ಲಿ ತಾನು ಪ್ರೀತಿಯಿಂದ ಸಾಕಿದ ಕೋಳಿಗಳನ್ನು ಹತ್ತಿಸಲು ನಿರಾಕರಿಸಿದ್ದ ಹಿನ್ನಲೆಯಲ್ಲಿ, ಕೋಳಿ ಬದುಕಲಿ ನಾನು ಗ್ರಾಮದಲ್ಲೇ ಇರುತ್ತೇನೆ ಎಂದು ಶಹಾಪುರ ತಾಲೂಕಿನ ಬೆಂಡೆಬೆಂಬಳಿ ಗ್ರಾಮದ ಹನುಮಂತಪ್ಪ ಹಠ ಹಿಡಿದಿದ್ದನು. ಅಧಿಕಾರಿಗಳು ಮನವೊಲಿಸಿದ ಬಳಿಕ ಈತ ಕೊನೆಗೆ ತನ್ನ ಪ್ರೀತಿಯ ಕೋಳಿಗಳ ಜೊತೆಗೇ ಬಸ್ ಹತ್ತಿ ಕಾಳಜಿ ಕೇಂದ್ರಕ್ಕೆ ತೆರಳಿದ. ಪ್ರಾಣಿಗಳಿಗೂ ಜೀವ ಇರುತ್ತಲ್ಲಾ ಎನ್ನುವ ಆತನ ಪ್ರಾಣಿ ಪ್ರೀತಿಗೆ ಸಂತ್ರಸ್ತರು ತಲೆದೂಗಿದರು.

## ಹೊಲ ಹಾಳಾಗಾಕ ಇನ್ನೇನು ಉಳದೈತಿ..!

ಧಾರವಾಡ: ಮೊದಲ ಮಳೆಗೆ ಹೆಸರು ಹತ್ತಿಕಾಳ ಆತ್ರಿ. ಎರಡನೆಯ ಮಳೆಗೆ ಸೋಯಾಬೀನ್, ಗೋಂಜಾಳಾ ಮಳ್ಯಾಗ ತೇಲಿ ಹೋದುವರಿ. ಈಗ ಮೂರನೇ ಮಳಿಗೆ ಆಲೂಗಡ್ಡಿ, ಹತ್ತಿ ಮತ್ ಶೇಂಗಾನೂ ನೀರಾಗ ನಿಂತು, ಹಾಳಾಗಾಕ ಹೊಲದಾಗ ಮತ್ತೇನು ಉಳದೈತಿ..? ಇದು ಧಾರವಾಡ ತಾಲೂಕಿನ ಯಾದವಾಡ ಗ್ರಾಮದ ಯುವ ರೈತ ವಿಠ್ಠಲ ದಿಂಡಲಕೊಪ್ಪ ಅವರ ಪ್ರಶ್ನೆ. 22 ಎಕರೆ ಹೊಲದಾಗ ಎಲ್ಲಾ ಪೀಕ್ ಇರಲಿ ಅಂತ ಹೆಸರು, ಸೋಯಾ, ಹತ್ತಿ, ಶೇಂಗಾ, ಆಲೂಗಡ್ಡೆನೂ ಹಾಕಿದ್ದೇ. ಪೀಕು ಚೆನ್ನಾಗಿಯೇ ಬಂದಿತ್ತು ಎಂದು ಕಣ್ಣೀರಿಟ್ಟಿದ್ದಾರೆ.

## ಹೊಳಿ ಬರ್ತದ ಜಲ್ದಿ ಬಸ್ ಹತ್ತರಿ ಅಂದರು!

ಯಾದಗಿರಿ: ನಡುರಾತ್ರಿ ತಲಾಟಿ ಮನಿಗಿ ಬಂದು, ಹೊಳಿ ಬರ್ತದ ಜಲ್ದಿ ಬಸ್ ಹತ್ರಿ ಎಂದಾಗ ಏನು ಮಾಡಬೇಕೆಂಬುದು ದಿಕ್ಕೇ ತೋಚಲಿಲ್ಲ ಎಂದು ಶಹಾಪುರ ತಾಲೂಕಿನ ಶಿವನೂರು ಗ್ರಾಮದ ಬಸಲಿಂಗಮ್ಮ ಕಣ್ಣೀರು ಹಾಕಿದರು. ಜಿಟಿಜಿಟಿ ಮಳೆಯಲ್ಲಿ, ನಡಗುತ್ತಾ ಹಸುಗೂಸುಗಳ ಸಮೇತ ಮೂರು ಊರು ಬಿಟ್ಟಿದೀವಿ. ಮನೆಯನ್ನು ಬಿಟ್ಟು ಇರಲು ಆಗುವುದಿಲ್ಲ, ವಾಪಸ್ ಹೋಗ್ಬೇಕು ಅನ್ನೋ ಮನಸ್ಸಾಗ್ತಿದೆ ಎಂದು ಅಂತ ನೋವು ತೋಡಿಕೊಂಡರು.



ಕಲಬುರಗಿ ಜಿಲ್ಲೆಯ ಅಫಜಲ್ಪುರ ತಾಲೂಕಿನ ಭೀಮಾ ತೀರದಲ್ಲಿರುವ ಮಣ್ಣೂರು ಗ್ರಾಮದ ಮಾಧವತೀರ್ಥ, ವೇದೇಶತೀರ್ಥ, ಗೋವಿಂದ ಒಡೆಯ ಯತಿಗಳ ವೃಂದಾವನಗಳು ಜಲಾವೃತಗೊಂಡಿರುವುದು.